ಶ್ರೀ ಬಿ. ಎಚ್. ಬೋರಣ್ಣಗೌಡ.—1952-53 ರಲ್ಲಿ ಬಾಕಿ ಡಿಸ್ಟ್ರಿಕ್ಟ್‌ಗಳಿಗೆ ಖರ್ಚುಮಾಡಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಖರ್ಚುಮಾಡಿದೆ. ವಿವರಗಳನ್ನು ಬೇಕಾದರೆ ಕೊಡುತ್ತೇನೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಹಾಸನ ಜಿಲ್ಲೆಯಲ್ಲಿ ರೆವೆನ್ಯೂ ಕಮಿಷನರು ಬಂದಿದ್ದಾಗ, ಅರ್ಧ ಖರ್ಚನ್ನು ಸರ್ಕಾರದವರು ಕೊಟ್ಟರೆ ರೈತರು ಇನ್ನರ್ಧವನ್ನು ಕೊಡಬೇಕೆಂದು ಮುಚ್ಚಳಿಕೆ ಬರೆದುಕೊಡಬೇಕೆಂದು ಕೇಳಿದುದು ನಿಜವೆ ?

ಶ್ರೀ ಕಡಿದಾಳ್ ಮಂಜಪ್ಪ.—ಗೊತ್ತಿಲ್ಲ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಅರೀತಿ ಕೇಳಿದ್ದರೆ ಏನು ಎಂಬುದನ್ನು ವಿಚಾರಣೆ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಸ್ಥಳೀಯ ಅಧಿಕಾರಿಗಳಿಗೆ ತಿಳಿಸಿದ್ದೇವೆ, ಹಾಗೆ ಮುಚ್ಚಳಿಕೆ ಕೇಳಬೇಕಾದ್ದಿಲ್ಲವೆಂದು.

ಶ್ರೀ ಟಿ. ಎಸ್. ಮೂಡಲಗಿರಿಗೌಡ (ಕುಣಿಗಲ್).—1952—53ನೆಯ ಸಾಲಿನಲ್ಲಿ ತುಮಕೂರು ಡಿಸ್ಟ್ರಿಕ್ಟಿಗೆ ಎಷ್ಟು ಹಣ ಕೊಟ್ಟಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ರೆವೆನ್ಯೂ ಕಮಿಷನರವರು ಮುಚ್ಚಳಿಕೆ ಬರೆದುಕೊಡಬೇಕೆಂದು ಕೇಳಿದರೆ ?

ಶ್ರೀ ಕಡಿದಾಳ್ ಮಂಜಪ್ಪ.—ಆಮೇಲೆ ಮುಚ್ಚಳಿಕೆ ಬರೆಸಿಕೊಳ್ಳಬೇಡಿ ಎಂದು ಹೇಳಿದೆ.

ಶ್ರೀ ಬಿ. ರಾಚಯ್ಯ (ಯಳಂದೂರು—ಅನುಸೂಚಿತ ಜಾತಿಗಳು).—ಕೇವಲ ಕೋಲಾರ, ಚಿತ್ರದುರ್ಗ, ತುಮಕೂರು ಇವುಗಳಿಗೆ ಮಾತ್ರ ದೊರಕಿದೆಯೆಂದಿದೆ ; ಮಿಕ್ಕದ್ದನ್ನು ಬಿಡಲು ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ತಾವು ಪ್ರಶ್ನೆಯನ್ನು ಓದಿ. 1951—52ನೆಯ ಸಾಲಿಗೆ ಸಂಬಂಧಪಟ್ಟ ಪ್ರಶ್ನೆ ಇದು.

ಶ್ರೀ ಬಿ. ರಾಚಯ್ಯ.—ಯಳಂದೂರು ತಾಲ್ಲೂಕಿನಲ್ಲಿ 9 ಗ್ರಾಮಗಳಲ್ಲಿ ಬೆಳೆಯಾಗಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

---

## QUESTIONS FOR ANSWERS FOR THE DAY.

*(Not taken up.)*

### Provision of electric lights to Thyamagondlu, Dobspet and Sivagange in Nelamangala Taluk.

*Q.*—528. **Sri D. M. GOVINDA RAJU** (Nelamangala).—

Will the Government be pleased to state :—

(*a*) whether it is a fact that the work is under execution to provide electric lights to Thyamagondlu, Dobspet and Sivagange in Nelamangala Taluk, Bangalore District ;

(*b*) the amount estimated in this respect ;

(*c*) in how many days it would be possible to complete the work and to supply electricity ?

*A.*—**Sri T. SIDDALINGAIYA** (Minister for Industries).—

(*a*) Yes.

(*b*) Rs. 4,46,000.

(*c*) About two to two and a half months' after railway guarding, which has to be put up, is approved by the railway authorites.

---

### Supply of electricity to Kariganur Village, Channagiri Taluk.

*Q.*—544. **Sri GANGA NAYAK** (Sorab-Shikaripur—Scheduled Castes).—

Will the Government be pleased to state :—

(*a*) whether it has come to their notice that though an estimate for supplying electricity to Kariganur Village, Channagiri Taluk has been prepared it has not been sanctioned as yet ;

(*b*) whether they would sanction it and arrange for starting the work soon ?

*A.*—**Sri T. SIDDALINGAIYA** (Minister for Industries).—

(*a*) As estimate for power supply to Kariganur at a cost of Rs. 48,500 has been prepared and is kept pending for want of grants.

(*b*) Work will be taken up when the estimate is sanctioned and when funds become available.

---

**Mr. SPEAKER.**—We shall now take up non-official business.

*Invitation issued by the Secretary in connection with Dr. Visvesvaraya's Lectures.*

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ಖಾಸಗಿ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಮೊದಲು ಒಂದು ವಿಷಯವನ್ನು ಪ್ರಸ್ತಾಪಿಸುವುದಕ್ಕೆ ಅವಕಾಶ ಬೇಡುತ್ತೇನೆ. ಅದು ಈಗ ತಾವೆ ಈ ಸಭೆಯ ಕಾರ್ಯ-

ದರ್ಶಿಯವರಿಂದ ನಮ್ಮ ಕೈಗೆ ಬಂದಿರತಕ್ಕ 4ನೆಯ ಸರ್‌ಕ್ಯುಲರ್ ವಿಚಾರ.

ಈ ದಿನ ಸಾಯಂಕಾಲ ಐದು ಗಂಟೆಗೆ ರೆಸಿಡೆನ್ಸಿಯಲ್ಲಿ ಡಾ॥ ಸರ್ ಎಂ. ವಿಶ್ವೇಶ್ವರಯ್ಯನವರು ಸಭಾಸದಸ್ಯರನ್ನು ಕುರಿತು ಭಾಷಣಮಾಡುತ್ತಾರೆ, ಸದಸ್ಯರು ಅಲ್ಲಿಗೆ ಬರಬೇಕೆಂದು ಸರ್ಕ್ಯುಲರ್‌ನಲ್ಲಿ ತಿಳಿಸಿದ್ದಾರೆ. ವಾಸ್ತವ್ಯ ವಿಶ್ವೇಶ್ವರಯ್ಯನವರು ಭಾರತದಲ್ಲೇ Grand old Man of India ಎಂದು ಕೀರ್ತಿಗಳಿಸಿ, ಮೈಸೂರು ಸಂಸ್ಥಾನಕ್ಕೆ ಅಪಾರ ಸೇವೆ ಸಲ್ಲಿಸಿ ಮಹೋಪಕಾರ ಮಾಡಿರುವ ಮಹಾವ್ಯಕ್ತಿಗಳು. ಅವರು ಈ ಸಭಾ ಸದಸ್ಯರನ್ನು ಕುರಿತು ಹಿತೋಕ್ತಿ ಹೇಳುವುದಕ್ಕೆ ಒಪ್ಪಿ ಅವರಿಗೆ 92ನೆಯ ವಯಸ್ಸಾಗಿರತಕ್ಕ ಕಾಲದಲ್ಲಿಯೂ ನಮ್ಮ ವೇಲೆ ಕರುಣೆಯಿಟ್ಟಿರುವುದಕ್ಕಾಗಿ ನಾವೆಲ್ಲರೂ ಕೃತಜ್ಞರಾಗಿದ್ದೇವೆ. ಆದುದರಿಂದ ನಾನು ಮುಂದೆ ಹೇಳತಕ್ಕ ಮಾತನ್ನು ಯಾರೂ ತಪ್ಪು ಅರ್ಥ ಮಾಡಿಕೊಳ್ಳಬಾರದೆಂದು ಪ್ರಾರ್ಥಿಸುತ್ತೇನೆ.

ಸಭಾಸದಸ್ಯರಿಗೆ ಕಾರ್ಯದರ್ಶಿಯವರು ಒಂದು ಸರ್ಕ್ಯುಲರ್ ಮೂಲಕ ಈ ವಿಚಾರವನ್ನು ತಿಳಿಸಿದ್ದಾರೆ. ನನಗೆ ತಿಳಿದಮಟ್ಟಿಗೆ ಶಾಸನಸಭಾ ಸದಸ್ಯರನ್ನು ಕುರಿತು ಭಾಷಣಮಾಡುವ ಈ ಅಧಿಕಾರ ಶ್ರೀಮನ್ಮಹಾರಾಜರವರಿಗೆ ಅಥವಾ ರಾಜಪ್ರಮುಖರಿಗೆ ಮಾತ್ರ ಇದೆ. ಸರ್ ಎಂ. ವಿಶ್ವೇಶ್ವರಯ್ಯನವರು ನಮಗೆ ಹಿತೋಪದೇಶ ಮಾಡುವುದು ಬಹಳ ಅಗತ್ಯ, ಅದಕ್ಕಾಗಿ ಕೃತಜ್ಞರಾಗಿದ್ದೇವೆ. ಆದರೆ ಇದು ಹೀಗೆ official ಆಗಿ ಆಗದೆ ಬೇರೆ ಯಾವುದಾದರೂ ಒಂದು ಸಂಸ್ಥೆ ಅಥವಾ ಸಂಘದ ಆಶ್ರಯದಲ್ಲಿ ಏರ್ಪಾಡಾಗಿದ್ದಿದ್ದರೆ ಸೂಕ್ತವಾಗಿರುತ್ತಿತ್ತೆಂದು ಹೇಳುತ್ತೇನೆ. ಏಕೆಂದರೆ, ಹೀಗೆ ಈ ಕಾರ್ಯಮಾಡುವ ಅಧಿಕಾರವನ್ನು ರಾಜಪ್ರಮುಖರು ಈ ದಿನ ಶ್ರೀವರ್ಮಾ ವಿಶ್ವೇಶ್ವರಯ್ಯನವರಲ್ಲರುವ ಪ್ರೀತಿ ಗೌರವಗಳಿಂದ ಗಮನಿಸಬೇಕೇ ಹೊರತು ಮುಂದೆ ಇಂಥಾ ಪ್ರಸಂಗ ಬಂದರೂ ಬರಬಹುದು ಎಂಬ ಭೀತಿಯಿಂದ ನಾನಿಲ್ಲಿ ಈ ವಿಷಯ ಪ್ರಸ್ತಾಪಮಾಡುತ್ತಿದ್ದೇನೆ. ಪುನಃ ನಾನು ಹೇಳುವುದೇನೆಂದರೆ—ಅವರು ನಮ್ಮನ್ನು ಕುರಿತು ಹಿತವಾಕ್ಯವನ್ನು ಹೇಳಲು ಒಪ್ಪಿರುವುದಕ್ಕಾಗಿ ನಾವು ಚಿರಋಣಿಗಳಾಗಿದ್ದೇವೆ. ಇಷ್ಟು ಮಾತನ್ನು ಹೇಳಿ, ಈ ರೂಪದಲ್ಲಿ ಇದು ಬರಬಾರದಾಗಿತ್ತೋ ಏನೋ ಎಂಬ ಸಂದೇಹ ಬಂದುದರಿಂದ ಇಲ್ಲಿ ಈ ವಿಚಾರವನ್ನು ಪ್ರಸ್ತಾಪಿಸಿದ್ದೇನೆ.

*ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮೂರು).—ಶ್ರೀವರ್ಮಾ ವೀರಣ್ಣಗೌಡರು ಹೇಳಿರುವ ಪ್ರತಿಯೊಂದು ಅಂಶವನ್ನೂ ನಾನು ಅನುಮೋದಿಸುತ್ತೇನೆ. ಒಂದು ವಿಷಯ ವೇನೆಂದರೆ, ಈ ಸಭೆಯಲ್ಲಿ ರಾಜಪ್ರಮುಖರು ಭಾಷಣ ಮಾಡುವುದು ಅಗತ್ಯ, ಅದಕ್ಕೆ ಅವಕಾಶವಿದೆ, ಇನ್ನಾರೂ ಮಾಡುವುದಕ್ಕೆ ಅವಕಾಶವಿಲ್ಲ. ಸಭೆ ನಡೆಯುವಾಗ ಕಾರ್ಯಕಲಾಪಗಳು ಪ್ರಾರಂಭವಾಗುವುದಕ್ಕೆ ಮುಂಚೆ ಶ್ರೀಮನ್ಮಹಾರಾಜರವರು ಭಾಷಣ ಮಾಡಬೇಕೆಂದಿದೆ. ಇದು ಸುಮ್ಮನೆ advice ಕೊಡುವುದಕ್ಕೆಂದು ಒಂದುವೇಳೆ ಏರ್ಪಾಡು ಮಾಡಿದ್ದರೆ, ಸರ್ಕಾರದವರು ಮಾಡಿದ್ದಾರೋ ಏನೋ ಎಂದಿರಬಹುದು. ಸರ್ಕಾರದವರು ಮಾಡಿದ್ದುದೇ ಆದರೆ ಇದನ್ನು ಸರ್ಕಾರದ 'ಸಮನ್ಸ್' ಎಂದು ನಾವು ಭಾವಿಸುವ ಹಾಗಿಲ್ಲ. ಇದು 'ಸರ್ಕ್ಯುಲರ್'. Summons is quite different from a circular. We might consider a circular as an invitation. ಏಕೆಂದರೆ ಸರ್ ಎಂ. ವಿಶ್ವೇಶ್ವರಯ್ಯನವರು ನಮ್ಮೆಲ್ಲರಿಗೂ ಬೇಕಾದ ವ್ಯಕ್ತಿ. ನಮ್ಮ ಸರ್ಕಾರದ ಆಡಳಿತಕ್ಕೆ ಬಹಳ ದಿವಸ ಕೂಡಿಕೊಂಡಿದ್ದವರೆಂದು ಭಾವಿಸಿಕೊಂಡಿದ್ದೇವೆ. ಸರ್ಕ್ಯುಲರನ್ನು ಸೆಕ್ರೆಟರಿಯವರು ಕಳುಹಿಸಬಹುದಾಗಿತ್ತೋ ಇಲ್ಲವೋ ಎಂಬುದು ಬೇರೆಯ ವಿಷಯ; ನಾವೆಲ್ಲರೂ ಬೇರೆ ಸ್ಥಳದಲ್ಲಿ ಸೇರಿ ಅವರಿಂದ ಸಲಹೆಯನ್ನು ಪಡೆಯುವುದು ಬೇರೆ ವಿಷಯ. ಒಂದು ಸರ್ಕ್ಯುಲರ್ ಕೊಟ್ಟಮಾತ್ರಕ್ಕೇ ಅದನ್ನು ಬೇರೆಯ ರೀತಿಯಾಗಿ ಭಾವಿಸದೆ ಅದನ್ನು ಒಂದು invitation ಎಂದು ಭಾವಿಸಬಹುದು. ಇದೇನೂ summons ಅಲ್ಲ ಅದಕಾರಣ precedent ಆಗುತ್ತದೆ ಎಂದು ಭಾವಿಸಬೇಕಾಗಿಲ್ಲ.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಬೇರೆಕಡೆ, ಪಾಶ್ಚಿಮಾತ್ಯ ದೇಶಗಳಲ್ಲಿ ಈ ಪದ್ಧತಿ ಇಲ್ಲವೆ?

ಶ್ರೀ ಎ. ಭೀಮಪ್ಪನಾಯಕ್.—ನನಗೆ ಅದು ಗೊತ್ತಿಲ್ಲ; ನಾನು ಹೋಗಿಲ್ಲ, ಓದಿಯೂ ಇಲ್ಲ.

ಒಟ್ಟಿನಲ್ಲಿ ಇದೊಂದು precedent ಏರ್ಪಡಿಸಿಕೊಳ್ಳದೆ ನಾವೆಲ್ಲರೂ ಅವರಿಗೆ ಕೃತಜ್ಞರಾಗಿದ್ದೇವೆಂದು ಹೇಳಿ ಶ್ರೀವರ್ಮಾ ವೀರಣ್ಣಗೌಡರು ಹೇಳಿದುದನ್ನು ಮೋದಿಸುತ್ತೇನೆ.

**Mr. SPEAKER.**—I think this is not a subject matter for debate on the floor of the House for the simple reason that this does not form part of the business of the House. Sri M. Visvesvaraya was requested by a friend of his to deliver lecture on the subject and the Secretary has requested such of the Hon'ble Members as are willing to attend to do so.

---

*Privilege of Members with reference to Short Notice Questions and Answers.*

***Sri K. LAKKAPPA** (Channarayapatna).—I want to raise a question of privilege. On the 21 instant I sent two or three Short Notice Questions and the reply to them is: "Since the Minister concerned has not given his consent, your questions cannot be taken up." I think I have put questions of public importance and of recent occurrence. Therefore it would have been better if the Government had answered those questions. Even if they intended to refuse to answer, they must have mentioned the reasons for refusing to answer such questions. They have neither given reasons nor quoted any rule.

*ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—ಸ್ವಾಮಿ, ಅಲ್ಪಕಾಲಾವಧಿ ಪ್ರಶ್ನೆ ಈ ಅಧಿವೇಶನದಲ್ಲಿ ಒಂದೇ ಒಂದು ಬಂದದ್ದೆಂದು ಕಾಣುತ್ತದೆ. ಪ್ರಶ್ನೆಗಳನ್ನು ಕಳುಹಿಸಿದ ಮೇಲೆ ಗಮನಾರ್ಹವಾದ ಅನೇಕ ವಿಷಯಗಳು ಸಂಸ್ಥಾನದ ಆಡಳಿತದಲ್ಲಿ ನಡೆಯಬಹುದು. ಈ ಅಲ್ಪಕಾಲಾವಧಿ ಪ್ರಶ್ನೆಗಳನ್ನು ಕಳುಹಿಸಲು ಅವಕಾಶ

(ಶ್ರೀ ಕೆ. ಪುಟ್ಟಸ್ವಾಮಿ).

34ನೆಯ ನಿಬಂಧನೆಯಲ್ಲಿರುವುದು ಅಂಥ ವಿಷಯಗಳನ್ನು ಸಭೆಯಲ್ಲಿ ಚರ್ಚೆಗೆ ತೆಗೆದುಕೆ ಳ್ಳುವುದಕ್ಕಾಗಿ. ಮಂತ್ರಿಗಳು ಒಪ್ಪಿದರೆ ಉತ್ತರ ಕೊಡಬಹುದೆಂದಿದ್ದರೂ ಕೂಡ ಉದಾರ ಮನಸ್ಸಿನಿಟ್ಟುಕೊಂಡು ಮಂತ್ರಿಗಳು ಅಂಥ ಪ್ರಶ್ನೆಗಳಿಗೆ ಜವಾಬುಕೊಟ್ಟರೆ ಅದರಿಂದ ಆದಳಿತದ್ಲಿರುವ ಅನೇಕ ಅಂತಗಳು ಜನತೆಯ ಗಮನಕ್ಕೆ ಬರುವುದಕ್ಕೆ ಅನುಕೂಲವಾಗುತ್ತದೆ. ಇನ್ನುಮೇಲಾದರೂ ಮಂತ್ರಿಗಳು ಒಪ್ಪಲಿಲ್ಲವೆಂದು ಉತ್ತರಗಳನ್ನು ಕೊಡಲು ಸಾಧ್ಯವಿಲ್ಲವೆಂದರೆ ಕಷ್ಟವಾಗುತ್ತದೆ. 34 ನೆಯ ನಿಬಂಧನೆಯನ್ನು ಯಾವ ಉದ್ದೇಶದಿಂದ ಮಾಡಿದೆಯೋ ಆ ಉದ್ದೇಶವನ್ನು ಸರ್ಕಾರದವರು ಗಮನದಲ್ಲಿಟ್ಟು ಅನುಸರಿಸಬೇಕೆಂದು ತಮ್ಮ ಮೂಲಕ ಪ್ರಾರ್ಥಿಸುತ್ತೇನೆ.

**Mr. SPEAKER.**—Rule 34 is referred to by the Hon'ble Member. The Speaker can admit such Short Notice Questions only with the consent of the Minister concerned. And in fact some Short Notice Questions have been admitted and the concerned Ministers have also called for information. Hon'ble Members know very well that the notice given is of such a short duration that the Government find it very difficult to get the information within this time limit. That is all. That does not mean any indifference or disrespect. No such motive can be imputed.

**Sri K. PUTTASWAMY.**—No. They have not stated the reasons. If they had stated the reasons, it would have been all right.

---

## NON-OFFICIAL BUSINESS.

### The Mysore Alienated Villages (Protection of Tenants and Miscellaneous Provisions) (Amendment) Bill, 1952.

*Motion for leave to introduce.*

**Sri G. A. THIMMAPPA GOWDA** (Arkalgud).—Sir, I move:

"That leave be granted to introduce the Mysore Alienated Villages (Protection of Tenants and Miscellaneous Provisions) (Amendment) Bill, 1952."

**Mr. SPEAKER.**—The question is:

"That leave be granted to introduce the Mysore Alienated Villages (Protection of Tenants and Miscellaneous Provisions) (Amendment) Bill, 1952."

*The motion was adopted.*

**Sri G. A. THIMMAPPA GOWDA.**—Sir, I introduce the Bill.

---

## RESOLUTIONS.

**Mr. SPEAKER.**—Resolutions. The first resolution stands in the name of Sri A. Bheemappa Naik.

**Sri M. LINGANNA** (Nanjangud).—Sir, I rise to a point of order so far as this resolution is concerned. This resolution is in the form of an expression of general opinion and I am afraid that it has been discussed often times through interpellations and resolutions and cut motions. Of course I have no bad intention whatsoever in regard to the position or the distressed conditions in the State. As per rules I believe this particular resolution is so omnibus and so general that it cannot be discussed on the floor of this House unless it is amended by my friend Sri A. Bheemappa Naik himself.

**Mr. SPEAKER.**—To which rule does the Hon'ble Member refer?

**Sri M. LINGANNA.**—Rule 102.

**Mr. SPEAKER.**—The resolution relates to a matter of public interest. There is no point of order. Hon'ble Member Sri A. Bheemappa Naik may move his resolution.

---

### No. 1. Declaring Distress Areas as Famine Areas.

***Sri A. BHEEMAPPA NAIK** (Molakalmuru).—Sir, I move:

"That this Assembly is of the opinion that all such places in Mysore State which are seriously affected by distress be immediately declared as 'Famine Areas' and suitable relief measures be undertaken forthwith."

ಸ್ವಾಮಿ, ಈ ಠರಾವನ್ನು ಸಭೆಯ ಮುಂದಿಡಲು ತಮ್ಮ ಅಪ್ಪಣೆಯನ್ನು ಕೇಳಿ ಈ ಸಂಬಂಧವಾಗಿ ಕೆಲವು ವಿಷಯಗಳನ್ನು ಅರಿಕೆ ಮಾಡಲು ಇಷ್ಟಪಡುತ್ತೇನೆ. ಮೈನೂರು ಸಂಸ್ಥಾನದಲ್ಲಿ ಕೆಲವು ಕಡೆ ಕ್ಷಾಮ